

6
ಮಂತ್ರಿಯು ಅತ್ಯಂತ ದುಬಾರಿಯಾದ ಶಾಲು ಒಂದನ್ನು ನಗರದಿಂದ ತರಿಸಿದನು.
ಪ್ರಭು! ಇದು ಬೆಲೆ ಬಾಳುವ, ಬಹಳ ಒಳ್ಳೆಯ ಶಾಲು.
ಹಾಗೇನು? ಒಳ್ಳೆಯದು.
ದೊರೆ ಶಾಲನ್ನು ಸಾಧುಮಹಾತ್ಮರಿಗೆ ಅತ್ಯಂತ ಗೌರವದಿಂದ ಅರ್ಪಿಸುತ್ತಾ......
7
ಮಹಾತ್ಮರೇ, ಚಳಿ ಸಹಿಸಲಸಾಧ್ಯವಾಗಿದೆ. ತಮ್ಮ ಶರೀರಕ್ಕೆ ಈ ಶಾಲನ್ನು ಹೊದಿಸುವ ಬಯಕೆ ನನ್ನದು. ತಾವು ಕೃಪೆಮಾಡಿ ನನಗೆ ಈ ಅವಕಾಶವನ್ನು ಕೊಡಿ.
ನಿನ್ನ ಇಚ್ಛೆ ಪೂರ್ಣವಾಗಲಿ.
ಸಾಧುಗಳ ಶರೀರದ ಮೇಲೆ ಶಾಲನ್ನು ಹೊದಿಸಿದ ನಂತರ, ದೊರೆ ತನ್ನ ಪರಿವಾರದೊಡನೆ ಸಾಧುಗಳಿಂದ ಬೀಳ್ಕೊಂಡ.
8
ಸ್ವಲ್ಪ ಸಮಯದ ನಂತರ ...
ಸಾಧುಗಳು ಊರಿನಲ್ಲಿ ಭಿಕ್ಷಕ್ಕಾಗಿ ಹೊರಟಾಗ, ಬಡ ಕುಟುಂಬದ ಚಿಕ್ಕ ಹುಡುಗಿಯೊಬ್ಬಳು ಚಳಿಯಿಂದ ನಡುಗುತ್ತಿರುವುದನ್ನು ಕಂಡರು.
ಬಾ ಮಗು! ಬಾ ಇಲ್ಲಿ!
9
ಸ್ವಾಮೀಜಿ ಅವಳನ್ನು ಮುಟ್ಟಿಕೋಬೇಡಿ. ಅವಳು ಕೆಳ ಜಾತಿಯವಳು.
ಮತ್ತೊಬ್ಬ ಅಲ್ಲಿದ್ದವನು...
ಏಯ್ ಹುಡುಗಿ! ಆ ಸಾಧುಗಳಿಗೆ ನಿನ್ನ ಜಾತಿ ಗೊತ್ತಿಲ್ಲದೆ ಕರೆದರೆ ಅವರ ಬಳಿ ಹೋಗುತ್ತಿದ್ದೀಯಲ್ಲ? ನಿನಗೆಷ್ಟು ಕೊಬ್ಬು!
10
ಅವರ ಟೀಕೆಗಳನ್ನು ಲೆಕ್ಕಿಸದೆ ಆ ಸಾಧುಗಳು ಆ ಹುಡುಗಿಯನ್ನು ಕರೆದು ಶಾಲನ್ನು ಅವಳಿಗೆ ಕೊಟ್ಟು, ಅವಳಿಗೆ ನಮಸ್ಕರಿಸಿದರು.
ಇದನ್ನು ದಯವಿಟ್ಟು ತೆಗೆದುಕೋ.
11
ಇದನ್ನು ನೋಡಿದ ಗೂಢಾಚಾರಿಯೊಬ್ಬ, ವಿಷಯ ವನ್ನು ದೊರೆಗೆ ತಿಳಿಸಲು ಅರಮನೆಗೆ ಓಡಿದ
ಪ್ರಭೋ! ನಿಮಗೆ ಆಘಾತವಾಗುವ ಸಮಾಚಾರವಿದೆ. ನೀವು ಆ ಸಾಧುಗಳಿಗೆ ಕೊಟ್ಟ ಬೆಲೆಬಾಳುವ ಶಾಲನ್ನು ಆ ಸಾಧುವು ಕೀಳುಜಾತಿಯ ಯಾವುದೋ ಹುಡುಗಿಗೆ ಕೊಟ್ಟುಬಿಟ್ಟಿದ್ದಾನೆ. ಊರಿಗೆ ಊರೇ ಇದನ್ನು ನೋಡಿ ನಗುತ್ತಿದೆ.
12


13
ಎಂಥಾ ಅಪಮಾನ! ಎಷ್ಟೊಂದು ಭಕ್ತಿ ಗೌರವಗಳಿಂದ ಅವರಿಗೆ ಅದನ್ನು ಕೊಟ್ಟಿದ್ದೆ! ನನ್ನನ್ನು ಅಪಮಾನಕ್ಕೆ ಗುರಿ ಮಾಡಲು ಎಂಥ ಧೈರ್ಯ ಆ ಸಾಧುವಿಗೆ! ಆತನನ್ನು ಇಲ್ಲಿಗೆ ಈಗಲೇ ಕರೆತನ್ನಿ.
ಸ್ವಾಮಿ! ಸ್ವಲ್ಪ ಶಾಂತರಾಗಿ. ಆ ಸಾಧು ದೊಡ್ಡ ಮಹಾತ್ಮ.
14
ನಾನು ಅವನ್ನೆಲ್ಲ ಲೆಕ್ಕಿಸುವುದೇ ಇಲ್ಲ. ಆತ ಬಂದು ತುಂಬಿದ ಸಭೆಯಲ್ಲಿ ಈ ರೀತಿ ಮಾಡಿದ್ದಕ್ಕೆ ಕಾರಣ ತಿಳಿಸಲೇಬೇಕು.
ಆಗಲಿ.
ಸ್ವಲ್ಪ ಹೊತ್ತಿನಲ್ಲೇ ತಯುಮನವರ್ ತುಂಬಿದ ಸಭೆಗೆ ಬಂದರು.
ಸ್ವಾಮೀಜಿ, ಕ್ಷಮಿಸಿ. ನನ್ನನ್ನು ಈ ರೀತಿ ಅವಮಾನಗೊಳಿಸಲು ಕಾರಣವೇನೆಂದು ತಿಳಿಯಬಹುದೆ?
ನಾನು... ನಿಮಗೆ ಅವಮಾನ ಮಾಡಿದೆನೆ?
15
16
ನಾನು ನಿಮಗೆ ಅಷ್ಟೊಂದು ಗೌರವದಿಂದ ಕೊಟ್ಟ ಶಾಲನ್ನು ಯಾರಿಗೋ ಕೊಟ್ಟು ಬಿಡುವುದು ಅಪಮಾನವಲ್ಲದೆ ಮತ್ತೇನು?
ಹೋ! ನಾನು ಆ ಹುಡುಗಿಗೆ ಕೊಟ್ಟುಬಿಟ್ಟ ಶಾಲಿನ ಬಗ್ಗೆ ಹೇಳುತ್ತಿದ್ದೀರೋ?
ಹೌದು ಸ್ವಾಮೀಜಿ.
ನೀವು ನನ್ನನ್ನು ನಿಮಗಿಂತ ದೊಡ್ಡವನೆಂದು ಎಣಿಸಿ ಆ ಶಾಲನ್ನು ನನಗೆ ಅರ್ಪಿಸಿದಿರಿ. ಅದೇ ರೀತಿ ನಾನೂ ಸಹ ನನಗಿಂತ ದೊಡ್ಡ ವ್ಯಕ್ತಿಗೆ ಅದನ್ನು ಅರ್ಪಿಸಿದೆ. ನೀವೇ ಒಬ್ಬ ದೊಡ್ಡ ಭಕ್ತರಾಗಿ ನಿಮಗಿಷ್ಟು ತಿಳಿಯಲಿಲ್ಲವೇ?
17
ನೀವೇನು ಹೇಳುತ್ತಿದ್ದೀರಿ? ಆ ಹುಡುಗಿಯಲ್ಲಿ ಯಾವ ದೊಡ್ಡತನವಿದೆ?
18
ಹೇ ರಾಜನ್! ಭಗವಂತನು ಎಲ್ಲರ ಹೃದಯದಲ್ಲೂ ವಾಸಿಸುತ್ತಿದ್ದಾನೆ. ಚಳಿಯಿಂದ ನಡುಗುತ್ತಿದ್ದ ಆ ಹುಡುಗಿ ಸಾಕ್ಷಾತ್ ಭಗವತಿಯೇ ಅಲ್ಲದೆ ಬೇರಾರೂ ಅಲ್ಲ! ನನ್ನನ್ನು ಪರೀಕ್ಷಿಸಲು ಭಗವತಿಯೇ ಆ ರೂಪದಲ್ಲಿ ಬಂದಿದ್ದಳು ಅಷ್ಟೇ. ಪ್ರತಿಯೊಬ್ಬರ ಹೃದಯದಲ್ಲಿಯೂ ನಾನು ಭಗವತಿಯನ್ನೇ ಕಾಣುತ್ತೇನೆ. ಆದ್ದರಿಂದಲೇ ನಾನು ಆ ಶಾಲನ್ನು ಭಗವತಿಗೆ ಅರ್ಪಿಸಿದೆ. ನಿಮ್ಮ ಶಾಲು ಭಗವತಿಗೆ ಅರ್ಪಿತವಾಗಿರುವುದರಿಂದ ನೀವು ಧನ್ಯರಾಗಿರುವಿರೆಂದು ತಿಳಿಯಬೇಕು..
ರಾಜ ಮತ್ತು ರಾಣಿ ಇಬ್ಬರೂ ಮಹಾತ್ಮ ತಯುಮನವರ್ ರವರ ಕಾಲಿಗೆ ಅಡ್ಡಬಿದ್ದರು.
19
ನಮ್ಮ ತಪ್ಪನ್ನು ಕ್ಷಮಿಸಿ. ನಿಮ್ಮ ನಿಜವಾದ ದೊಡ್ಡತನ ನಮಗೀಗ ತಿಳಿಯುತ್ತಿದೆ.







## ಸುದ್ದಿ ಸಂಚಯ

# ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು

**ಹೊಸ ಪರಮಾಧ್ಯಕ್ಷರು ಹಾಗೂ ಉಪಾಧ್ಯಕ್ಷರುಗಳು:** ಸ್ವಾಮಿ ಗೌತಮಾನಂದಜಿಯವರು ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾಗಿಯೂ, ಸ್ವಾಮಿ ದಿವ್ಯಾನಂದಜಿ ಮತ್ತು ಸ್ವಾಮಿ ವಿಮಲಾತ್ಮಾನಂದಜಿಯವರು ಉಪಾಧ್ಯಕ್ಷರಾಗಿಯೂ ಚುನಾಯಿತರಾಗಿದ್ದಾರೆ.

**ಶಾಖಾಕೇಂದ್ರಗಳ ಚಟುವಟಿಕೆಗಳು: ಭಾರತದಲ್ಲಿ**

ಮಾರ್ಚ್ ೨೫ರಂದು **ಮಾಲ್ಡಾ** ಕೇಂದ್ರದ ನವೀಕೃತ ಕ್ಯಾಂಪಸ್ ಅನ್ನು ಸ್ವಾಮಿ ಗಿರೀಶಾನಂದಜಿಯವರು ಉದ್ಘಾಟಿಸಿದರು. **ಮುಜಾಫರ್‌ಪುರ್** ಕೇಂದ್ರವು ಈಶಾವಾಸ್ಯ ಉಪನಿಷತ್ ಕುರಿತ ೨ ದಿನಗಳ ವಿಚಾರ ಸಂಕಿರಣವನ್ನು ಮಾರ್ಚ್ ೩೦, ೩೧ರಂದು ನಡೆಸಿತು. **ಮಾಯಾವತಿ** ಅದ್ವೈತ ಆಶ್ರಮವು ತನ್ನ ೧೨೫ನೇ ವಾರ್ಷಿಕೋತ್ಸವವನ್ನು ನಡೆಸಿತು. ಮಾರ್ಚ್ ೩೧ ಹಾಗೂ ಏಪ್ರಿಲ್ ೧ ರಂದು ನಡೆದ ಈ ಕಾರ್ಯಕ್ರಮದಲ್ಲಿ ಉತ್ತರಾಖಂಡ ಆಶ್ರಮದ ಗವರ್ನರ್ ಹಾಗೂ ೪೧ ಸಂನ್ಯಾಸಿಗಳು, ೩೫೦ ಮಂದಿ ಭಕ್ತರು ಭಾಗವಹಿಸಿದ್ದರು. **ಸೊಹರಾ** ಕೇಂದ್ರವು ಏಪ್ರಿಲ್ ೬ ರಿಂದ ೮ರ ವರೆಗೆ ಮೆರವಣಿಗೆ, ಸಾರ್ವಜನಿಕ ಸಭೆ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಶತಮಾನೋತ್ಸವವನ್ನು ಆಚರಿಸಿತು. **ರಾಜ್‌ಕೋಟ್** ಕೇಂದ್ರದಲ್ಲಿ ಏಪ್ರಿಲ್ ೧೭ರಂದು ಸ್ವಾಮಿ ಸುಹಿತಾನಂದಜಿಯವರು 'ಸ್ವಾಮಿ ಆತ್ಮಸ್ಥಾನಂದ ಭವನ'ವೆಂಬ ಆಫೀಸ್ ಬ್ಲಾಕನ್ನು ಉದ್ಘಾಟಿಸಿದರು. **ಗುರುಗ್ರಾಮ** ಕೇಂದ್ರವು ಋಷಿಕೇಶದಿಂದ ೮೦ ಕಿ.ಮೀ ದೂರದಲ್ಲಿರುವ ಜೌಲಂಗಿ ಎಂಬಲ್ಲಿ ಏಪ್ರಿಲ್ ೧೭ರಂದು 'ಶಾರದಾ ತಪೋವನ'ವೆಂಬ ಕುಟೀರವನ್ನು ಉದ್ಘಾಟಿಸಿದೆ. **ಬಲರಾಮ ಮಂದಿರ**ದಲ್ಲಿ ಹೊಸದಾಗಿ ಖರೀದಿಸಲಾದ ಕಟ್ಟಡದಲ್ಲಿ ಒಂದು ಆಸ್ಪತ್ರೆಯನ್ನು ಪ್ರಧಾನ ಕಾರ್ಯದರ್ಶಿಗಳು ಉದ್ಘಾಟಿಸಿದರು. **ಬೆಂಗಳೂರು** ರಾಮಕೃಷ್ಣ ಮಠದಲ್ಲಿ ಎರಡು ದಿನಗಳ ರಾಮಾಯಣವನ್ನು ಕುರಿತ ವಿಚಾರ ಸಂಕಿರಣ ನಡೆಯಿತು. **ತ್ರಿಶೂರು** ಮಠದಲ್ಲಿ ಹೊಸ ಸಾಧುನಿವಾಸ ಹಾಗೂ ಸ್ವಾಗತ ದ್ವಾರ ಏಪ್ರಿಲ್ ೨೮ರಂದು ಉದ್ಘಾಟಿಸಲ್ಪಟ್ಟಿತು. **ನರೇಂದ್ರಪುರ** ಕೇಂದ್ರದ ಅಂಧ ಬಾಲಕ ಅಕಾಡೆಮಿಯು ಮಾರ್ಚ್ ೩೧ರಂದು ಗ್ವಾಲಿಯರ್‌ನಲ್ಲಿ ನಡೆದ ರಾಷ್ಟ್ರೀಯ ವಿಶೇಷ ಚೇತನರ ಈಜು ಸ್ಪರ್ಧೆಯಲ್ಲಿ ೧೫ ಚಿನ್ನ ಹಾಗೂ ೧೧ ಬೆಳ್ಳಿಯ ಪದಕಗಳನ್ನು ಗಳಿಸಿತು.

**ವಿದೇಶಗಳಲ್ಲಿ: ಬ್ರೆಝಿಲ್** ದೇಶದ ಸಾವೋಪೌಲೋ ಕೇಂದ್ರವು ಏಪ್ರಿಲ್ ೬-೭ರಂದು ರಜತ ಮಹೋತ್ಸವವನ್ನು ಆಚರಿಸಿತು. ವಿಶೇಷ ಪೂಜೆ, ಭಜನೆ, ಪ್ರವಚನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. **ಫಿಜಿ** ಕೇಂದ್ರಕ್ಕೆ ಅಲ್ಲಿನ ಭಾರತದ ರಾಯಭಾರಿ ಕೇಂದ್ರವು ಏಪ್ರಿಲ್ ೭ರಂದು 'ಭಾರತ್ ವೀತಿ ಮೈತ್ರಿ ಪ್ರಶಸ್ತಿ' ಯನ್ನು ಪ್ರದಾನ ಮಾಡಿತು.

### ಮೌಲ್ಯಶಿಕ್ಷಣ ಹಾಗೂ ಯುವ ಸಮ್ಮೇಳನಗಳು

**ಧಾಲೇಶ್ವರ:** ಅಗರ್ತಲ: ಏಪ್ರಿಲ್ ೨೧ರಂದು ಅಧ್ಯಾತ್ಮಿಕ ಸಮ್ಮೇಳನ. **ಗುರುಗ್ರಾಮ:** ಮಾರ್ಚ್ ೧೮ರಿಂದ ೨೫ರ ವರೆಗೆ ದೆಹಲಿ ಮತ್ತು ಸೊಹರಾಗಳಲ್ಲಿ ನಾಲ್ಕು ಶಿಕ್ಷಕ ತರಬೇತಿ ಕಾರ್ಯಕ್ರಮಗಳು. **ಕಾಂಕುರಗಾಛಿ:** ಕೋಲ್ಕತ್ತಾ : ಫೆಬ್ರವರಿ ೨೫ರಂದು ಹೌರಾದ ಬಗ್ನಾನ್‌ನಲ್ಲಿ ಯುವಸಮ್ಮೇಳನ. **ಕಾನ್ಪುರ:** ಏಪ್ರಿಲ್ ೧೩ರಂದು ೨೦೦ ಮಂದಿ ಶಾಲಾಕಾಲೇಜು ವಿದ್ಯಾರ್ಥಿಗಳಿಗೆ ವಿಶೇಷ ಭಾಷಣ. **ಮದುರೈ** : ಏಪ್ರಿಲ್ ೬ರಂದು ಪಾಲಕರಿಗೆ ವಿಶೇಷ ಶಿಬಿರ. **ರಾಯಪುರ:** ಏಪ್ರಿಲ್ ೧೫ರಂದು ವ್ಯಕ್ತಿತ್ವ ವಿಕಸನ ಶಿಬಿರ. **ತಂಜಾವೂರು:** ಏಪ್ರಿಲ್ ೫ ಹಾಗೂ ೧೬ಕ್ಕೆ ಎರಡು ಮೌಲ್ಯ ಶಿಕ್ಷಣ ಕಾರ್ಯಕ್ರಮಗಳು.

**ಬೇಸಿಗೆ ಶಿಬಿರ:** ಇಂದೋರ್, ಕಾಲಡಿ, ಮಂಗಳೂರು, ಮೈಸೂರು ಕೇಂದ್ರಗಳು ಏಪ್ರಿಲ್ ೮ ರಿಂದ ೨೧ರ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರವನ್ನು ನಡೆಸಿದವು.

**ನೇತ್ರ ಚಿಕಿತ್ಸಾ ಶಿಬಿರ: ಭಾರತದಲ್ಲಿ** : ಬಜೇಪ್ರತಾಪಪುರ, ಛತ್ರಪತಿ ಸಂಭಾಜಿನಗರ (ಔರಂಗಾಬಾದ್), ಗುರಪ್, ಜಮ್ಮು, ಜೆಮಶೆಡ್‌ಪುರ, ಕಲ್ಯಾಣಿ, ಕಾನ್‌ಪುರ, ಖೇತ್ರಿ, ಲಕ್ನೋ, ಮದುರೈ, ನವದ್ವೀಪ, ನಟ್ಟರಾಂಪಳ್ಳಿ, ಪೋರಬಂದರ್, ರಾಹರಾ, ರಾಂಚಿ ಮೊರಾಬಾದಿ ಹಾಗೂ ವಿಶಾಖಪಟ್ಟಣಂ ಕೇಂದ್ರಗಳು ವೈದ್ಯಕೀಯ ಹಾಗೂ ನೇತ್ರ ಚಿಕಿತ್ಸಾ ಶಿಬಿರಗಳನ್ನು ನಡೆಸಿದವು.







Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020